ವಿಶ್ವವಾಣಿ vishwavani.news
07.03.2024 ಗುರುವಾರ

ಗುರು
ಅರಿವಿನ ಹರವು

ಅಮೃತ ವಾಹಿನಿ

ಪರಸ್ಪರ ಸಹಾಯ

● ಬೇಲೂರು ರಾಮಮೂರ್ತಿ

ನಿಮಗೆ ಉಪಯೋಗವಾಗಲೀ, ಬಿಡಲೀ ನೀವು ಮಾಡಿದ ಸಹಾಯದಿಂದ ಬೇರೆಯವರಿಗೆ ಉಪಯೋಗವಾದರೆ ನಿಮ್ಮ ಶ್ರಮ ಸಾರ್ಥಕ ಎನ್ನುವ ಮನೋಭಾವ ನಿಮ್ಮಲ್ಲಿರಬೇಕು ಎಂದು ಗುರುಗಳು ಅಂದಿನ ಪಾಠ ಪ್ರಾರಂಭಿಸಿದರು. ಶಿಷ್ಯರಿಗೆ ಇವತ್ತು ಗುರುಗಳು ನಮಗೆ ಒಂದು ಮಹತ್ವವಾದ ವಿಚಾರ ತಿಳಿಸುತ್ತಾರೆ ಎನ್ನುವ ಕುತೂಹಲದಿಂದ ಇದ್ದರು.

ಗುರುಗಳು ತಮ್ಮ ಮಾತು ಮುಂದುವರಿಸಿ 'ಯಾವುದೇ ಒಂದು ಕೆಲಸವಾದರೂ ಅದು ಒಬ್ಬರಿಂದ ಸಾಧ್ಯವಿಲ್ಲ ಎನ್ನುವುದು ಲೋಕೋಕ್ತಿ. ಉದಾಹರಣೆಗೆ ನೀವು ಊಟ ಮಾಡಬೇಕಾದರೆ ನಿಮ್ಮ ಕಣ್ಣುಗಳು ಆಹಾರವನ್ನು ನೋಡಬೇಕು, ಅದು ನಿಮಗೆ ಸರಿಯಾದ ಆಹಾರ ಎಂದು ನಿಮ್ಮ ಮನಸ್ಸು ನಿಮಗೆ ತಿಳಿಸಬೇಕು, ಮೂಗು ಇದರ ವಾಸನೆ ನನಗೆ ಹೊಂದುತ್ತೆ ಎನ್ನಬೇಕು, ಈ ಆಹಾರ ನನಗಿಷ್ಟ ಎನ್ನುವಂತೆ ನಿಮ್ಮ ನಾಲಗೆಯಿಂದ ನೀರು ಹೊರಹೊಮ್ಮಬೇಕು. ನಂತರ ನಿಮ್ಮ ಐದು ಬೆರಳುಗಳೂ ಒಟ್ಟಾಗಿ ದುಡಿದು ತಟ್ಟೆಯಲ್ಲಿ ಇದ್ದ ಅನ್ನ ಅಥವಾ ಇನ್ಯಾವುದೇ ಆಹಾರವನ್ನು ಕಲಸಬೇಕು, ನಂತರ ನಿಮ್ಮ ಬಾಯಿಗೆ ಇಡಬೇಕು. ಬಾಯಿಯಲ್ಲಿರುವ ಹಲ್ಲುಗಳು ಅದನ್ನು ಪಚನಗೊಳಿಸಬೇಕು. ಹಾಗೆ ಹಲ್ಲುಗಳು ಪಚನಗೊಳಿಸಲು ನಾಲಗೆ ಸಹಾಯ ಮಾಡಬೇಕು. ನಂತರ ನಾಲಗೆ ಆಹಾರವನ್ನು ಬಾಯಿಂದ ನಿಮ್ಮ ಹೊಟ್ಟೆಗೆ ಸಾಗಿಸಬೇಕು. ಹೊಟ್ಟೆಯೇನೋ ತುಂಬಿ ನೆಮ್ಮದಿಯಾಯಿತು.



ಆದರೆ ಊಟ ಕಂಡ ಕಣ್ಣುಗಳು, ವಾಸನೆ ನೊಡಿದ ಮೂಗು, ತುತ್ತು ಮಾಡಿ ಬಾಯಿಗಿಟ್ಟ ಕೈ ಬೆರಳುಗಳು, ಆಹಾರವನ್ನು ಜಗಿಯಲು ಸಹಾಯ ಮಾಡಿದ ಹಲ್ಲುಗಳು, ರುಚಿ ಸರಿಯಾಗಿದೆಯೋ ಇಲ್ಲವೋ ನೊಡಿದ ನಾಲಗೆ ಇವುಗಳಿಗೆ ಏನು ಪ್ರಯೋಜನ. ಪ್ರತ್ಯಕ್ಷವಾಗಿ ಪ್ರಯೋಜನವಾಗದಿದ್ದರೂ ಪರೋಕ್ಷವಾಗಿ ಪ್ರಯೋಜನವಾಗುತ್ತದೆ. ಹೇಗೆಂದರೆ ಆಹಾರದಿಂದ ಹೊಟ್ಟೆ ತುಂಬಿ, ಇಡೀ ಶರೀರಕ್ಕೆ ಶಕ್ತಿ ಬಂದಾಗ ಅದು ಎಲ್ಲ ಅವಯವಗಳಿಗೂ ಹಂಚಿಹೋಗುತ್ತದೆ. ನಾವು ಹೀಗೆ ಒಟ್ಟಾಗಿ ಪರಸ್ಪರ ಸಹಾಯ ಮಾಡಿದರೆ ಮಾತ್ರ ನಾವೂ ಶಕ್ತಿವಂತರಾಗುತ್ತೇವೆ ಎನ್ನುವ ಭಾವನೆ ಇದ್ದಾಗ ಮಾತ್ರ ಕಣ್ಣುಗಳು ಆಹಾರವನ್ನು ನೋಡುತ್ತವೆ, ಮೂಗು ವಾಸನೆ ನೋಡುತ್ತದೆ, ಕೈಬೆರಳುಗಳು ಅನ್ನ ಕಲಸುತ್ತವೆ, ತುತ್ತು ಮಾಡುತ್ತವೆ, ಬಾಯಿಗೆ ಸಾಗಿಸುತ್ತವೆ, ನಾಲಗ ರುಚಿ ನೋಡುತ್ತದೆ, ಹಲ್ಲು ಆಹಾರವನ್ನು ಅಗಿಯುತ್ತದೆ, ನಂತರ ನಾಲಗೆ ಆಹಾರವನ್ನು ಹೊಟ್ಟೆಗೆ ಸಾಗಿಸುತ್ತದೆ. ಉದಾಹರಣೆಗೆ ನಿಮ್ಮ ಕೈನ ಐದು ಬೆರಳುಗಳ ಪೈಕಿ ಒಂದು ಬೆರಳಿಗೆ ಗಾಯವಾಗಿದ್ದರೆ ಉಳಿದ ನಾಲ್ಕು ಬೆರಳುಗಳು ಆಹಾರವನ್ನು ಕಲಸಿ ಬಾಯಿಗೆ ಸಾಗಿಸುವುದು ಕಷ್ಟವಾಗುತ್ತದೆ. ಆಗ ನಿಮಗೆ ಆ ಒಂದು ಬೆರಳಿನ ಮಹತ್ವ ಅರಿವಾಗುತ್ತದೆ.

ಅದಕ್ಕೇ ಸಮಾಜ ಎನ್ನುವ ವ್ಯವಸ್ಥೆಯಲ್ಲಿ ನಾವು ಒಬ್ಬರಿಗೆ ಸಹಾಯ ಮಾಡಿದರೆ ಅವರು ಮತ್ತೊಬ್ಬರಿಗೆ ಸಹಾಯ ಆಗಿ ಹಾಗೇ ಇಡೀ ಸಮಾಜವೇ ಸಹಾಯದ ವೃತ್ತದಿಂದ ಕೂಡಿ ಅದರ ಪರಿಣಾಮವಾಗಿ ಇಡೀ ಸಮಾಜವೇ ಸ್ವಾಸ್ಥ್ಯವಾಗಿ ಇರುವುದಕ್ಕೆ ಅನುಕೂಲವಾಗುತ್ತದೆ. ಹೀಗಾಗಿ ನೀವು ಇನ್ನೊಬ್ಬರಿಗೆ ನಿಮ್ಮ ಕೈಲಾದಷ್ಟು ಸಹಾಯ ಮಾಡುವುದನ್ನು ಎಂದಿಗೂ ಮರೆಯಬೇಡಿ' ಎಂದು ಗುರುಗಳು ಅಂದಿನ ಪಾಠವನ್ನು ಮುಕ್ತಾಯಗೊಳಿಸಿದರು.

ಅಧ್ಯಾತ್ಮ ಕಥಾಂಜಲಿ

ಭಕ್ತ ಸೇವಕ ಶಿವ

● ಮಾಯಾ ಬಾಲಚಂದ್ರ

ಹದಿನಾಲ್ಕನೇ ಶತಮಾನದಲ್ಲಿ ಬೆಳಗಿದ ಕವಿ ಜ್ಯೋತಿ, ವಿದ್ಯಾಪತಿ. ಮೈಥಿಲಿ, ಭೋಜಪುರಿ ಮತ್ತು ಬೆಂಗಾಲಿ ಭಾಷೆಗಳಲ್ಲಿ ರಚಿಸಿದ ಇವರ ಕೃತಿಗಳು ಸುಪ್ರಸಿದ್ಧ. ಮಹಾನ್ ಶಿವ ಭಕ್ತನಾದ ವಿದ್ಯಾಪತಿಯನ್ನು ಮಿಥಿಲೆಯ ಕವಿ ಕೋಗಿಲೆ ಎಂಬ ಬಿರುದೂ ಅಲಂಕರಿಸಿದೆ. ಈತನ ಭಕ್ತಿಗೆ ಮೆಚ್ಚಿ ಶಿವನು, ತನ್ನ ನಿಜವೇಷವನ್ನು ಮರೆಮಾಚಿ, ಉಗ್ನ ಎಂಬ ಸಾಮಾನ್ಯ ಮಾನವನಾಗಿ ಈತನನ್ನು ಸಂಧಿಸುತ್ತಾನೆ ಎಂಬ ಕಥೆಯಿದೆ. ಈ ರೀತಿ ಭಕ್ತ ಮತ್ತು ಭಗವಂತನ ಮುಖಾಮುಖಿಯ ಹಲವು ಕಥೆಗಳು ಇದ್ದರೂ, ಉಗ್ನನ ಕಥೆ ವಿಶೇಷ ಎನಿಸಿದೆ.

ವಿದ್ಯಾಪತಿಯು ಉಗ್ನನನ್ನು ತನ್ನ ಸೇವಕನಾಗಿ ನೇಮಿಸಿಕೊಳ್ಳುತ್ತಾನೆ. ತನ್ನ ಪ್ರಯಾಣಗಳಲ್ಲಿ ಉಗ್ನನ ಸೇವೆಯನ್ನು ಪಡೆಯುತ್ತಾನೆ. ಒಮ್ಮೆ ಪ್ರಯಾಣದಲ್ಲಿ ವಿದ್ಯಾಪತಿಗೆ ತೀವ್ರ ನೀರಡಿಕೆಯಾಗುತ್ತದೆ. ಹತ್ತಿರದಲ್ಲಿ ಎಲ್ಲೂ ನೀರಿನ ಸುಳಿವಿಲ್ಲ. ಆಗ ಭಕ್ತನ ಕಷ್ಟವನ್ನು ನೊಡಲಾಗದೇ, ಉಗ್ನನು ತನ್ನ ಜಠೆಯಲ್ಲಿದ್ದ ಗಂಗೆಯನ್ನು ತಂಬಿಗೆಯಲ್ಲಿ ತುಂಬಿ ವಿದ್ಯಾಪತಿಗೆ ನೀಡುತ್ತಾನೆ. ಅದನ್ನು ಕುಡಿದ ವಿದ್ಯಾಪತಿಯು, ಇದು ಗಂಗಾಜಲವೇ ಎಂದು ಖಚಿತವಾಗಿ ಗುರುತಿಸಿ,ಅದರ ರಹಸ್ಯ ಹೇಳಲು ಉಗ್ನನನ್ನು ಒತ್ತಾಯಿಸುತ್ತಾನೆ. ಅನ್ಯಮಾರ್ಗವಿಲ್ಲದೆ ಶಿವ ಸತ್ಯ ಹೇಳುತ್ತಾನೆ.

ತನ್ನ ಆರಾಧ್ಯ ದೈವವನ್ನೇ ತನ್ನ ಸೇವಕನನ್ನಾಗಿಸಿಕೊಂಡು ಅಪಚಾರವೆಸಗಿದೆ ಎಂದು ವಿದ್ಯಾಪತಿ ಹಲುಬುತ್ತಾನೆ. ಆಗ ಶಿವ 'ಈ ಸತ್ಯವನ್ನು ಯಾರ ಬಳಿಯೂ ಹೇಳದಿದ್ದರೆ ನಿನ್ನೊಡನೆ ಇರುವೆ' ಎಂದು ಹೇಳುತ್ತಾನೆ. ಸಂತೋಷದಿಂದ ಒಪ್ಪಿದ ವಿದ್ಯಾಪತಿ ಶಿವನನ್ನು ಮನೆಗೆ ಕರೆದೊಯ್ಯುತ್ತಾನೆ. ಅಂದಿನಿಂದ ತನ್ನ ಆರಾಧ್ಯ ದೈವಕ್ಕೆ ವಿದ್ಯಾಪತಿ ಅತಿಯಾದ ಕಾಳಜಿ ತೋರಲು ಪ್ರಾರಂಭಿಸುತ್ತಾನೆ. ಆದರೆ, ಈ ಬದಲಾವಣೆಯನ್ನು ಮನೆಯಲ್ಲಿದ್ದ ಆತನ ಪತ್ನಿಯು ಗಮನಿಸುತ್ತಾಳೆ. ಪತಿಯ ಕಾಳಜಿಯ ಹಿನ್ನೆಲೆ ಅರಿಯದ ಪತ್ನಿಗೆ ಇದು ಕಹಿ ಎನಿಸುತ್ತದೆ. ಆಕೆ, ಎಂದಿನಂತೆ ನೇರವಾಗಿಯೇ ಉಗ್ನನನ್ನು ಶಿಕ್ಷಿಸುತ್ತಾಳೆ.

ಇದನ್ನು ಸಹಿಸಲಾಗದೆ ವಿದ್ಯಾಪತಿಯು 'ಉಗ್ನನೇ ಶಿವ' ಎಂಬ ಸತ್ಯವನ್ನು ಹೇಳಿಬಿಡುತ್ತಾನೆ. ಈತ ಮಾತಿಗೆ ತಪ್ಪಿದನೆಂಬ ಕಾರಣಕ್ಕೆ ಶಿವ ಅದೃಶ್ಯನಾಗುತ್ತಾನೆ. ಎಲ್ಲೆಡೆಯೂ ಶಿವನನ್ನು ಹುಡುಕಿದ ವಿದ್ಯಾಪತಿಗೆ ಉಗ್ನಸ್ಥಾನ ಎಂಬಲ್ಲಿ ಶಿವ ಗೋಚರವಾಗುತ್ತಾನೆ. ಈಶ್ವರನಿಗೆ ಸರ್ವ ಜೀವಿಗಳೆಡೆಗೆ ಅಪಾರ ಪ್ರೇಮ. ಹೇಗೆ ತಂದೆಗೆ ತನ್ನ ಶ್ರೇಷ್ಠ ಸಂತಾನ ಉಳಿದ ಮಕ್ಕಳಿಗೆ ಸನ್ಮಾರ್ಗ ತೋರಿದರೆ ಪರಮಾನಂದವೋ ಹಾಗೆ ಶಿವನಿಗೂ. ವಿದ್ಯಾಪತಿಯು ಜನರಿಗೆ ಸನ್ಮಾರ್ಗ ತೋರಲಿ ಎಂದು ಭಕ್ತಿ ಸಾಹಿತ್ಯವನ್ನು ಎಲ್ಲೆಡೆ ಪಸರಿಸುವ ಹೊಣೆಯನ್ನು ಆತನಿಗೆ ವಿಧಿಸುತ್ತಾನೆ.

ಜಗತ್ತಿಗೆ ಒಡೆಯನಾದ ಜಗದೀಶ್ವರನು ತನ್ನ ಭಕ್ತನ ಸೇವಕನಾಗಿ ಆತನನ್ನು ಉದ್ಧರಿಸಿದ. ನಿಷ್ಕಾಮ ಪ್ರೇಮಕ್ಕೆ ಸದಾ ಒಲಿಯುವ ಶಿವನನ್ನು ಬಸವಣ್ಣ ಬಣ್ಣಿಸಿದ್ದು ಹೀಗೆ 'ಪರಮೇಶ್ವರನ ಘನವೆಂಬೆನೇ.. ನಮ್ಮ ಕೂಡಲಸಂಗನ ಶರಣರ ಮನದ ಕೊನೆಯ ಮೊನೆಯ ಮೇಲಡಗಿದನು'. ಕುಮಾರವ್ಯಾಸ ಶಿವನನ್ನು ಕರೆದದ್ದೇ ಶರಣ ಸಂಗ ವ್ಯಸನನೆಂದು. ಜ್ಞಾನ, ಕರ್ಮ, ಭಕ್ತಿ ಮಾರ್ಗಗಳಿಂದ ಶಿವ ಸಾನ್ನಿಧ್ಯ ಸಾಧ್ಯ.

ತಂಜಾವೂರಿನ ಬೃಹದೀಶ್ವರ



● ಡಾ.ಉಮಾಮಹೇಶ್ವರಿ ಎನ್

ತಂಜಾವೂರಿನ ಬೃಹದೀಶ್ವರ ದೇವಸ್ಥಾನದ ಬಗ್ಗೆ ಸಾಕಷ್ಟು ಮಾಹಿತಿ ಎಲ್ಲರಲ್ಲೂ ಇದೆ. ಅದರ ಶಿಲ್ಪಕಲೆ, ಸೌಂದರ್ಯ, ಗೋಪುರದ ಭವ್ಯ ನಿಲುವು ಎಲ್ಲವೂ ವಿಶ್ವಪ್ರಸಿದ್ಧ. ಆ ದೇಗುಲದ ಫೋಟೋಗಳೂ ಹಲವು ಮಾಧ್ಯಮಗಳಲ್ಲಿ ಸಾಕಷ್ಟು ಪ್ರಚುರಗೊಂಡಿವೆ. ಆದರೆ, ಅದರ ಬೃಹತ್ ನಿಲುವಿನ ಭವ್ಯತೆಯನ್ನು ಅನುಭವಿಸಲು ಅದರ ಎದುರು ನಿಲ್ಲಬೇಕು! ಅದು ಎಷ್ಟು ಬೃಹದಾಕಾರವಾಗಿದೆ ಎಂಬ ಅರಿವು ನನಗೆ ಆಗಿದ್ದು, ಕಳೆದ ತಿಂಗಳ ಮೊದಲ ವಾರ ತಮಿಳುನಾಡಿನ ದೇವಸ್ಥಾನಗಳ ಪ್ರವಾಸ ಕೈಗೊಂಡಾಗ. ಆ ದೇಗುಲದ ಅದ್ಭುತ ಎನ್ನಬಹುದಾದ ಗೋಪುರದ ಎದುರು ನಾವು ನಿಂತಾಗ, ನಾವೆಷ್ಟು ಕುಬ್ಜರು ಎಂಬ ಅರಿವಾಗುತ್ತದೆ! ದಕ್ಷಿಣದ ಮೇರು, ರಾಜರಾಜೇಶ್ವರಮ್, ಪೆರುವುಡೈಯಾರ್ ಕೋವಿಲ್ ಎಂಬ ಇತರ ನಾಮಧೇಯಗಳೂ ಈ ದೇವಸ್ಥಾನಕ್ಕಿವೆ.



ಪ್ರಸಿದ್ಧ ಚೋಳರಾಜ ಒಂದನೇ ರಾಜರಾಜಚೋಳನ ಕಾಲದಲ್ಲಿ ಇದರ ನಿರ್ಮಾಣವಾಯಿತು. ಕ್ರಿ.ಶ. 1004 –1010ರಲ್ಲಿ ನಿರ್ಮಾಣ ನಡೆಯಿತು ಎನ್ನುತ್ತವೆ ದಾಖಲೆಗಳು. 11ನೇ ಶತಮಾನದಲ್ಲಿ ನಿರ್ಮಾಣವಾದ ದೇವಸ್ಥಾನದ ಸುತ್ತಲೂ, ರಕ್ಷಣೆಗಾಗಿ ಒಂದು ಕಾಲುವೆ ಇತ್ತು. ವಿಮಾನ ಗೋಪುರ, ಮುಖ್ಯ ದೇವಸ್ಥಾನ, ಗೋಡೆಗಳಲ್ಲಿನ ಚಿತ್ತಾರಗಳು, ಶಾಸನಗಳು, ಹಲವಾರು ಕಲ್ಲಿನ ಮೂರ್ತಿಗಳು ಅಂದಿನಿಂದಲೇ ಇಲ್ಲಿದ್ದವಂತೆ. ಕಾಲಾಂತರದಲ್ಲಿ ಕೆಲವು ಚಿತ್ರಗಳು ಫಾಸಿಗೊಂಡಿವೆ. ಮುಂದಿನ ಶತಕಗಳಲ್ಲಿ ಇದರ ಪ್ರಾಂಗಣವನ್ನು ವಿಸ್ತರಿಸಿ ಹೊರಪ್ರಾಕಾರವನ್ನು ನಿರ್ಮಿಸಲಾಯಿತು. ಸುತ್ತಲಿನ ಕಾಲುವೆಯನ್ನು ಮುಚ್ಚಲಾಯಿತು. ಈಗ ಈ ದೇವಸ್ಥಾನದ ಸುತ್ತಲೂ ಇರುವ ಪ್ರಾಕಾರ ಮತ್ತು ಇತರ ಕೆಲವು ನಿರ್ಮಿತಿಗಳು 16ನೇ ಶತಮಾನದ ನಂತರ ನಿರ್ಮಾಣವಾದವು. ಸುತ್ತಲೂ ಇರುವ ಪ್ರಾಕಾರವು ಸಹ ರಕ್ಷಣೆಯನ್ನು ಕೊಡುತ್ತದೆ. ಕಾಲದಿಂದ ಕಾಲಕ್ಕೆ ಇದನ್ನು ವಿಸ್ತರಿಸುವ ಕಾರ್ಯ ನಡೆದಿದೆ; ಈ ಪಾಗಾರದ ಮೇಲೆ ಸುತ್ತಲೂ ನಂದಿಯ ಮೂರ್ತಿಗಳು ವಿರಾಜಿಸುತ್ತಿವೆ. ಇವುಗಳ ಒಟ್ಟು ಸಂಖ್ಯೆ 1008. 108 ಶಿವಲಿಂಗಗಳೂ ಈ ಪ್ರಾಕಾರದ ಒಳಗೆ ಸುತ್ತಲೂ ಜಾಗ ಪಡಕೊಂಡಿವೆ.

ಕೆಲವು ಮಂಟಪಗಳು ಹಾಗೂ ಗುಡಿಗಳು ವಿವಿಧ ಕಾಲಘಟ್ಟಗಳಲ್ಲಿ ತಲೆಎತ್ತಿದವು.

ಪೂರ್ವಾಭಿಮುಖವಾಗಿರುವ ದೇವಸ್ಥಾನದ ಸುಂದರ ಗೋಪುರಗಳುಳ್ಳ ದ್ವಾರಗಳನ್ನು ದಾಟಿ ಒಳ ನಡೆದಾಗ ದೇವಸ್ಥಾನದ ಸೌಂದರ್ಯವನ್ನು ಕಂಡು ಮನಸೋತೆವು. ಈ ದೇಗುಲವನ್ನು ನೋಡುವ ಉದ್ದೇಶದಿಂದ ಬೆಳಗ್ಗಿನ ಆರು ಗಂಟೆಗೇ ಅಲ್ಲಿ ತಲುಪಿದ್ದೆವು. ಸೂರ್ಯೋದಯವಾದಂತೆ ಕಿರಣಗಳು ಗೋಪುರದ ಶಿಖರವನ್ನು ಸ್ಪರ್ಶಿಸತೊಡಗಿದಾಗ ಏನೋ ಸಂಭ್ರಮ, ಆ ಭವ್ಯ ನೋಟವು ಎಲ್ಲರಲ್ಲೂ ಧನ್ಯತಾ ಭಾವವನ್ನು ತಂದಿದ್ದು ನಿಜ. ಮೊದಲಿಗೆ ಪ್ರಾಕಾರದೊಳಗಿದ್ದ ಗಣೇಶ, ಆರು ಮುಖಗಳ ಕಾರ್ತಿಕೇಯ, ಬೃಹನ್ನಾಯಕಿ, ದಕ್ಷಿಣಾಮೂರ್ತಿ ಗುಡಿಗಳನ್ನು ನೋಡಿದೆವು. ಅದರ ಜೊತೆಗೆಯೇ ಮುಖ್ಯ ದೇವಸ್ಥಾನದ ವಿಮಾನ ಗೋಪುರವನ್ನು ವಿವಿಧ ಕೋನಗಳಿಂದ ಕಂಡು ಸಂಭ್ರಮಿಸಿದೆವು.

80 ಟನ್ ತೂಕದ ಶಿಲಾ ಕಲಶ

ತುತ್ತ ತುದಿಯಲ್ಲಿರುವ 80 ಟನ್ ತೂಕದ ಕಲ್ಲಿನ ಭಾಗವನ್ನು ಆನೆಗಳ ಸಹಾಯದಿಂದ ಆರು ಕಿ. ಮೀ. ಉದ್ದದ ಮರಳಿನ ಇಳಿಜಾರನ್ನು ನಿರ್ಮಿಸಿ, ಅದರ ಸಹಾಯದಿಂದ ಸಾಗಿಸಿದ್ದ ವಿಷಯ ಮೊದಲೇ ತಿಳಿದಿತ್ತು. ಆದರೂ ಕಣ್ಣಾರೆ ಗೋಪುರದ ಕಲಶವನ್ನು ಕಂಡಾಗಆ ಶ್ಚರ್ಯಕ್ಕೆ ಕಾರಣವಾಯಿತು. ಇಡೀ ಗೋಪುರವನ್ನು ನಿರ್ಮಿಸುವಾಗ ಯಾವುದೇ ಸಿಮೆಂಟ್‌ನಂತಹ ವಸ್ತುಗಳ ಬಳಕೆಯಾಗಿಲ್ಲ.

ಕರಾರುವಾಕ್ಕಾದ ಲೆಕ್ಕಾಚಾರ ಮಾಡಿ ನಿರ್ಮಿಸಿದ ಕಲ್ಲಿನ ಭಾಗಗಳನ್ನು ಹೊಂದಿಸಿ ಇರಿಸಲಾಗಿದ್ದು ಈಗಲೂ ಹಾಗೆಯೇ ಇವೆ. ಒಟ್ಟು 16 ಅಂತಸ್ತುಗಳನ್ನು ಹೊಂದಿರುವ ಈ ವಿಮಾನ ಗೋಪುರ, ಜಗತ್ತಿನಲ್ಲೇ ಅತಿದೊಡ್ಡ ವಿಮಾನಗೋಪುರವೆಂಬ (ಐತಿಹಾಸಿಕ ಕಾಲದ) ಹೆಗ್ಗಳಿಕೆಗೆ ಪಾತ್ರವಾಗಿದೆ. ಕೆಳಗಿನಿಂದ ಮೇಲಕ್ಕೆ ಕಿರಿದಾಗುವ 13 ಅಂತಸ್ತುಗಳು ಚೌಕಾಕಾರದಲ್ಲಿವೆ.

ದೇವಸ್ಥಾನದ ಮುಖ್ಯ ದೇವರು

ಲಿಂಗರೂಪದಲ್ಲಿರುವ ಶಿವ. 29 ಅಡಿಗಳಷ್ಟು ಎತ್ತರವಿರುವ ಶಿವಲಿಂಗ ಸುಮಾರು ಎರಡು ಅಂತಸ್ತುಗಳ ಎತ್ತರವನ್ನು ಆವರಿಸಿಕೊಂಡಿದೆ. ಇಲ್ಲಿನ ಗರ್ಭಗುಡಿಯ ದ್ವಾರ ದೇವಸ್ಥಾನದ ಮುಖ್ಯದ್ವಾರಕ್ಕಿಂತ ಎಷ್ಟೋ ದೊಡ್ಡದಾಗಿದೆ. (ನಮ್ಮ ದೇಶದ ಹಲವು ಕಡೆ, ಗರ್ಭಗುಡಿಯ ದ್ವಾರವು ದೇವಸ್ಥಾನದ ಮುಖ್ಯದ್ವಾರಕ್ಕಿಂತ ಚಿಕ್ಕದಾಗಿರುವುದು ವಾಡಿಕೆ.)

29 ಅಡಿ ಎತ್ತರದ ಶಿವಲಿಂಗಕ್ಕೆ ನೇರ ಎದುರಿನಲ್ಲಿ ಇರುವ ನಂದಿ ಮಂಟಪ ಇಲ್ಲಿನ ಇನ್ನೊಂದು ಆಕರ್ಷಣೆ. ಏಕಶಿಲಾರಚನೆಯಾದ ಇದು ಲೇಪಾಕ್ಷಿಯ ನಂದಿಯ ನಂತರದ ಅತಿದೊಡ್ಡ ನಂದಿ ವಿಗ್ರಹ. 2 ಮೀಟರ್ ಎತ್ತರ, 6 ಮೀಟರ್ ಉದ್ದ ಹಾಗೂ ಎರಡೂವರೆ ಮೀಟರ್ ಅಗಲದ ಈ ಬೃಹತ್ ನಂದಿಯನ್ನು ನೋಡುವುದು ಕಣ್ಣುಗಳಿಗೆ ಹಬ್ಬ. ಈ ಬೃಹತ್ ನಂದಿಯ ನಿರ್ಮಾಣವು, ನಾಯಕರ ಕಾಲದಲ್ಲಿ ನಡೆಯಿತು. ಅದಕ್ಕೂ ವಕ್ಷಿಂಚೆ ಇದ್ದ ಮೂಲ ನಂದಿಯ ವಿಗ್ರಹವು ತುಸು ಚಿಕ್ಕದಾಗಿತ್ತಂತೆ. ನಂದಿ ಮಂಟಪದ ಛಾವಣಿಯಲ್ಲಿ ರಂಗುರಂಗಿನ ಚಿತ್ತಾರಗಳಿವೆ.

ಈ ಬೃಹದೀಶ್ವರ ದೇಗುಲದ ಆವರಣದಲ್ಲಿ ಇನ್ನೂ ಹಲವು ದೇಗುಲಗಳಿವೆ. ಇಲ್ಲಿರುವ ಬೃಹನ್ನಾಯಕಿಯ ದೇವಸ್ಥಾನದ ನಿರ್ಮಾಣ 14ನೇ ಶತಮಾನದ ಪಾಂಡ್ಯರ ಕಾಲದಲ್ಲಿ ಆಯಿತು. ಇದರ ಮುಖಮಂಟಪದ ರಚನೆ ನಂತರದ ನಾಯಕರ ಕಾಲದ್ದು.

ದಕ್ಷಿಣಕ್ಕೆ ಮುಖಮಾಡಿರುವ ಈ ದೇವಸ್ಥಾನದ ಮುಖಮಂಟಪದ ಛಾವಣಿಯ ಚಿತ್ತಾರಗಳು ಮರಾಠರ ಕಾಲದಲ್ಲಿ ಅಸ್ತಿತ್ವಕ್ಕೆ ಬಂದವು. ಸುಬ್ರಹ್ಮಣ್ಯ ದೇವಸ್ಥಾನವು 17 ನೇ ಶತಮಾನದ ನಾಯಕರ ಕಾಲದಲ್ಲಿ ನಿರ್ಮಾಣಗೊಂಡಿತು. ನವಿಲಿನ ಮೇಲೆ ಕುಳಿತಿರುವ ಷಣ್ಮುಖನ ವಿಗ್ರಹವನ್ನು ಒಂದೇ ಕಲ್ಲಿನಲ್ಲಿ ಕೆತ್ತಿದ್ದಾರೆ.

ಇಲ್ಲಿನ ಶಿಲಾ ಕಂಬಗಳಲ್ಲಿ ಹಲವಾರು ಸುಂದರ ಕೆತ್ತನೆಗಳಿವೆ. ಗಣೇಶನ ದೇವಸ್ಥಾನವು 19 ನೆಯ ಶತಮಾನದಲ್ಲಿ ಮರಾಠ ರಾಜ ಎರಡನೇ ಸರಭೋಜಿಯಿಂದ ನಿರ್ಮಿಸಲ್ಪಟ್ಟಿತು.

ಇಂದು, ತಂಜಾವೂರಿನ ಬೃಹದೀಶ್ವರ ದೇಗುಲವು ವಿಶ್ವಪ್ರಸಿದ್ಧ, ಇಲ್ಲಿನ ಗೋಪುರ ಮತ್ತು ಕೆತ್ತನೆಗಳು ವಿಶ್ವವಿಖ್ಯಾತ. 1987ರಲ್ಲಿ ಈ ದೇವಸ್ಥಾನ ಯುನೆಸ್ಕೋದಿಂದ ವಿಶ್ವಪಾರಂಪರಿಕ ತಾಣದ ಮಾನ್ಯತೆ ಪಡೆಯಿತು.

ಶಿವ ಎಂಬ ಮಹಾತತ್ವ

● ಡಾ.ಗುರುರಾಜ ಪೋಶೆಟ್ಟಿಹಳ್ಳಿ

ಶಿವನೆಂದರೆ ಶಾಂತ. ಕೈಯಲ್ಲಿ ಕಪಾಲ ಹಿಡಿದು ಭೈರಾಗಿಯಂತಹ ಭಿಕ್ಷೆ ಬೇಡುತ್ತಾ ಮೂರ್ಲೋಕ ಸುತ್ತುತ್ತಾ, ಸ್ಮಶಾನವನ್ನೇ ಆಸರೆಯನ್ನಾಗಿ ಮಾಡಿಕೊಂಡ ಆತನ ಆರಾಧನೆಗೆ ಬಳಸುವ ವಸ್ತುವೋ ಪರಿಮಳ ರಹಿತ ದತ್ತೂರ ಪುಷ್ಪ, ಒರಟೊರಟಾದ ಬಿಲ್ವಪತ್ರೆ. ಎಲ್ಲರಿಂದ ತ್ಯಜಿಸಲ್ಪಟ್ಟ ವಸ್ತು ಶಿವನಿಗೆ ಪ್ರಿಯವಾಗುತ್ತದೆ. ಅದಕ್ಕೊಂದು ಸ್ಪಷ್ಟ ಉದಾಹರಣೆ ಸಮುದ್ರ ಮಂಥನದ ಕಾಲದಲ್ಲಿ ದೇವಾನುದೇವತೆಗಳು, ಅಸುರರೂ ಅಮೃತಕ್ಕೆ ಆಸೆ ಪಟ್ಟರು. ಅಮೃತೋದ್ಭವಕ್ಕೂ ಮುನ್ನ ಹುಟ್ಟಿದ ಕಾಲಕೂಟ ವಿಷ ಯಾರೊಬ್ಬರಿಗೂ ಬೇಡವಾಗಿತ್ತು. ಸ್ವತಃ ಮೃತ್ಯುಂಜಯನಾದ ಶಿವ ಅಮೃತವನ್ನು ಬಯಸಲಿಲ್ಲ. ಋಷಿ, ಮುನಿ, ಗಣವೆಲ್ಲಾ ಒಂದಾಗಿ ಬೇಡಿದರೂ ಶಿವ ಕಾಲಕೂಟ ವಿಷವನ್ನೇ ಸೇವಿಸಿ ವಿಷಕಂಠನಾದ. ಲೋಕ ಹಿತವನ್ನು ಕಾಪಾಡಿದ.

ಶಿವನೋ ಯೋಗಿ. ಆತ ಇಂದ್ರಿಯಾತೀತನಾಗಿದ್ದಾನೆ. ಕಾಮನೆಗಳಿಂದ ಹೊರತಾಗಿದ್ದಾನೆ. ಭವಯೋಗಿಯಂತೆ ಕಂಡರೂ ಗೃಹಸ್ಥನಂತೆ ತನ್ನ ಸತಿ ಪಾರ್ವತಿಯೊಡನೆ ಕಾಲ ಕಳೆಯುತ್ತಾನೆ. ತನ್ನ ಗಣಕೂಟಗಳ ಜತೆಗೂಡಿ ನೃತ್ಯ ಮಾಡುತ್ತಾನೆ. ಗಣೇಶ, ಸುಬ್ರಮಣ್ಯರೆಂಬ ಮಕ್ಕಳನ್ನೂ ಪಡೆದಿದ್ದಾನೆ. ಪ್ರಪಂಚದೊಳಗೆ ಇದ್ದು ಇಲ್ಲದಂತಿರುವ ವ್ಯಕ್ತಿತ್ವವೇ ಶಿವನನ್ನು ರೂಪಿಸಿದೆ. ಎಲ್ಲಿಯವರೆಗೆ ಅಂತ